# 7

# ಮಿಲ್ಲೆನ್ನಿಯಮ್, ಒಂದು ಸಾವಿರ ವರ್ಷದ ಆಳ್ವಿಕೆ

ಯೇಸುವು ಪರಲೋಕದೊಳಗೆ ಏರಿಹೋದದ್ದು ನಿಶ್ಚಿತವಾದದ್ದಾಗಿರುವಂತೆಯೇ, ಆತನು ಪುನಃ ಬರುವನು (ಯೋಹಾನ 14:3; ಅಪೊಸ್ತಲರ ಕೃತ್ಯಗಳು 1:11). ಆತನು ಹಿಂದಿರುಗಿ ಬಂದ ಮೇಲೆ ಏನಾಗುವುದು? ಮಿಲ್ಲೆನ್ನಿಯಮ್ ಆಳ್ವಿಕೆ, ಯೇಸುವಿನ ಒಂದು ಸಾವಿರ ವರ್ಷಗಳ ಆಳ್ವಿಕೆ ಇರುವುದೋ? ಸಾವಿರ ವರ್ಷಗಳು ಯೇಸುವಿನ ಆಳ್ವಿಕೆಯ ಅಕ್ಷರಶಃ ಸಾವಿರ ವರ್ಷಗಳನ್ನು ಒಳಗೊಂಡಿರುವುದೋ ಇಲ್ಲವೇ ಅದು ಸಮಯದ ಅವಧಿಯ ಸಂಕೇತವಾಗಿರುವುದೋ? ಒಂದು ರಾಜ್ಯವನ್ನು ಸ್ಥಾಪಿಸಿ, ಯೆರೂಸಲೇಮಿನಲ್ಲಿ ದಾವೀದನ ಸಿಂಹಾಸನದ ಮೇಲೆ ಒಂದು ಸಾವಿರ, ವರ್ಷದವರೆಗೆ ಭೂಲೋಕದ ಮೇಲೆ ಆಳಲು ಆತನು ಜಯಶಾಲೀ ಚಕ್ರಾಧಿಪತಿಯಂತೆ ಹಿಂದಿರುಗಿ ಬರುವನೋ? ಯೆಹೂದ್ಯರು ಆತನನ್ನು ತಿರಸ್ಕರಿಸಿದ್ದರಿಂದ ದೇವರ ರಾಜ್ಯಕ್ಕೆ ಯೇಸುವು ಸಭೆಯನ್ನು ಪರ್ಯಾಯವಾಗಿ ಇಡುವನೋ?

ಮಿಲ್ಲೆನ್ನಿಯಮ್‌ದ ಇಲ್ಲವೇ ಸಾವಿರ ವರ್ಷಗಳ ಆಳ್ವಿಕೆಯ ಬಗ್ಗೆ ಹೆಚ್ಚು ಚರ್ಚೆಯನ್ನು ಉತ್ಪಾದಿಸುವ ವಾಕ್ಯಭಾಗ, ಪ್ರಕಟನೆ 20:1-10:

> ಆಗ ಒಬ್ಬ ದೇವದೂತನು ಅಧೋಲೋಕದ ಬೀಗದ ಕೈಯನ್ನೂ ದೊಡ್ಡ ಸರಸಣಿಯನ್ನೂ ಕೈಯಲ್ಲಿ ಹಿಡಿದುಕೊಂಡು ಪರಲೋಕದಿಂದ ಇಳಿದು ಬರುವದನ್ನು ಕಂಡೆನು. ಅವನು ಪಿಶಾಚನೂ ಸೈತಾನನೂ ಆಗಿರುವ ಪುರಾತನ ಸರ್ಪನೆಂಬ ಘಟಸರ್ಪನನ್ನು ಹಿಡಿದು ಸಾವಿರ ವರುಷ ಬಂಧನದಲ್ಲಿಟ್ಟನು. ಆ ಸಾವಿರ ವರುಷ ತೀರುವ ತನಕ ಸೈತಾನನು ಇನ್ನೂ ಜನಗಳನ್ನು ಮರುಳುಗೊಳಿಸದ ಹಾಗೆ ದೇವದೂತನು ಅವನನ್ನು ಅಧೋಲೋಕದಲ್ಲಿ ದೊಬ್ಬಿ ಬಾಗಿಲು ಮುಚ್ಚಿ ಅದಕ್ಕೆ ಮುದ್ರೆ ಹಾಕಿದನು. ಆ ಸಾವಿರ ವರುಷಗಳಾದ ಮೇಲೆ ಅವನಿಗೆ ಸ್ವಲ್ಪಕಾಲ ಬಿಡುಗಡೆಯಾಗಬೇಕು.
>
> ತರುವಾಯ ಸಿಂಹಾಸನಗಳನ್ನು ಕಂಡೆನು. ಅವುಗಳ ಮೇಲೆ ಜನರು ಕೂತಿದ್ದರು: ನ್ಯಾಯತೀರಿಸುವ ಅಧಿಕಾರವು ಅವರಿಗೆ ಕೊಡಲ್ಪಟ್ಟಿತು, ಇದಲ್ಲದೆ ಯೇಸುವಿನ ವಿಷಯವಾದ ಸಾಕ್ಷಿಯ ನಿಮಿತ್ತವಾಗಿಯೂ ದೇವರ ವಾಕ್ಯದ ನಿಮಿತ್ತವಾಗಿಯೂ ತಲೆಹೊಯಿಸಿಕೊಂಡವರ ಆತ್ಮಗಳನ್ನೂ ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕರಿಸದೆ ತಮ್ಮ ಹಣೆಯ ಮೇಲೆ ಮತ್ತು ಕೈಯ ಮೇಲೆ ಗುರುತು ಹಾಕಿಸಿ ಕೊಳ್ಳದೆ ಇರುವವರನ್ನೂ ಕಂಡನು. ಅವರು ಜೀವಿತರಾಗಿ ಎದ್ದು ಸಾವಿರ ವರುಷ ಕ್ರಿಸ್ತನೊಂದಿಗೆ ಆಳಿದರು. ಮಿಕ್ಕ ಸತ್ತವರು ಸಾವಿರ ವರುಷ ತೀರುವ ತನಕ ಜೀವಿತರಾಗಿ ಎಳಲಿಲ್ಲ. ಇದೇ ಪ್ರಥಮ ಪುನರುತ್ಥಾನವು. ಪ್ರಥಮ ಪುನರುತ್ಥಾನದಲ್ಲಿ ಸೇರಿರುವವನು ಧನ್ಯನೂ ಪರಿಶುದ್ಧನೂ ಆಗಿದ್ದಾನೆ. ಇಂಥವರ ಮೇಲೆ ಎರಡನೆಯ ಮರಣಕ್ಕೆ ಅಧಿಕಾರವಿಲ್ಲ; ಆದರೆ ಅವರು

> ದೇವರಿಗೂ ಕ್ರಿಸ್ತನಿಗೂ ಯಾಜಕರಾಗಿ ಕ್ರಿಸ್ತನೊಂದಿಗೆ ಆ ಸಾವಿರ ವರುಷ ಆಳುವರು.
>
> ಆ ಸಾವಿರ ವರುಷಗಳು ತೀರಿದ ಮೇಲೆ ಸೈತಾನನಿಗೆ ಸೆರೆಯಿಂದ ಬಿಡುಗಡೆಯಾಗುವದು. ಅವನು ಹೊರಗೆ ಬಂದು ಭೂಮಿಯ ನಾಲ್ಕು ದಿಕ್ಕುಗಳಲ್ಲಿರುವ ಗೋಗ್, ಮಾಗೋಗ್ ಎಂಬ ಜನಾಂಗಗಳನ್ನು ಮರುಳುಗೊಳಿಸಿ ಅವರನ್ನು ಯುದ್ಧಕ್ಕೆ ಕೂಡಿಸುವನು; ಅವರ ಸಂಖ್ಯೆಯು ಸಮುದ್ರದ ಮರಳಿನಷ್ಟಿರುವದು. ಅವರು ದೇಶದಲೆಲ್ಲಾ ಹರಡಿಕೊಂಡು ದೇವಜನರ ದಂಡಿಗೂ ನಮ್ಮ ಪ್ರಿಯ ಪಟ್ಟಣಕ್ಕೂ ಮುತ್ತಿಗೆ ಹಾಕಿದರು. ಆಗ ಪರಲೋಕದಿಂದ ಬೆಂಕಿ ಇಳಿದು ಬಂದು ಅವರನ್ನು ದಹಿಸಿಬಿಟ್ಟಿತು. ಇದಲ್ಲದೆ ಅವರನ್ನು ಮರುಳುಗೊಳಿಸಿದ ಸೈತಾನನು ಬೆಂಕಿ ಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬಲ್ಪಟ್ಟನು. ಅಲ್ಲಿ ಮೃಗವೂ ಸುಳ್ಳು ಪ್ರವಾದಿಯೂ ಕೂಡ ಇದ್ದಾರೆ; ಅವರು ಹಗಲಿರುಳು ಯುಗಯುಗಾಂತರಗಳಲ್ಲಿಯೂ ಯಾತನೆ ಪಡುತ್ತಿರುವರು.

ನಿಶ್ಚಿತವಾಗಿಯೂ ಒಂದು ಸಾವಿರ ವರ್ಷದ ಆಳ್ವಿಕೆಯು ಈ ವಾಕ್ಯಭಾಗದಲ್ಲಿ ಹೇಳಲ್ಪಟ್ಟಿರುತ್ತದೆ, ಆದರೆ ಸಾವಿರ ವರ್ಷದ ಆಳ್ವಿಕೆ ಯಾವುದು? ಅದು ಯಾವಾಗ ಮತ್ತು ಎಲ್ಲಿ ಆಗುವುದು? ಸಾವಿರ ವರ್ಷಗಳ ಆಳ್ವಿಕೆಯಲ್ಲಿ ಯಾರು ಆಳುವರು? ಸಾವಿರ ವರ್ಷಗಳ ಆಳ್ವಿಕೆಯು ಅಕ್ಷರಶಃವಾದದ್ದೋ ಇಲ್ಲವೇ ಸಾಂಕೇತಿಕವಾದದ್ದೋ?

ಸಾವಿರ ವರ್ಷದ ಆಳ್ವಿಕೆಯನ್ನು ಕುರಿತು ಪ್ರತಿಯೊಂದು ಪ್ರಾಮುಖ್ಯವಾದ ದೃಷ್ಟಿಕೋನದಲ್ಲಿ ಬಹಳ ವಿಧವಾದ ಭಿನ್ನತೆಗಳು ಕಂಡುಬರುತ್ತವೆ. ಅವು ಸಾವಿರ ವರ್ಷಗಳಿಗೆ ಕಾಲಗಣನೆಯ ಸಂಬಂಧಗಳಿಗೆ ತಕ್ಕಂತೆ ವರ್ಗೀಕರಿಸಲ್ಪಟ್ಟಿರುವವು. (1) ಪೋಸ್ಟ ಮಿಲ್ಲೆಯಾನ್ನಿಯಲಿಜಮ್ ("post" ಎಂಬುದರ ಅರ್ಥ "after" ಎಂದಾಗುತ್ತದೆ), (2) ಅಮಿಲ್ಲೆನ್ನಿಯಾಲಿಜಮ್ ("a" [ಅ] ಉಪಶಬ್ದದ ಅರ್ಥ "not" ಇಲ್ಲ ಎಂದಾಗುತ್ತದೆ), ಮತ್ತು (3) ಪ್ರಿಮಿಲ್ಲೆನ್ನಿಯಾಲಿಜಮ್ ("pre" ಎಂಬುದರ ಅರ್ಥ "before" ಮೊದಲು ಎಂದಾಗುತ್ತದೆ).

*ಪೋಸ್ಟಮಿಲ್ಲೆನ್ನಿಯಾಲಿಜಮ್* ಎಂಬುದು ಸಾವಿರ ವರ್ಷಗಳು ಕ್ರೈಸ್ತ ಯುಗದ ಅಲಂಕಾರಿಕವಾಗಿರುವುದು, ಅದರಲ್ಲಿ ಯೇಸುವಿನ ಆಳ್ವಿಕೆಯು ಇಂದಿನ ವಾಸ್ತವಿಕತೆಯಾಗಿದೆ, ಅದು ಆತನ ಬರೋಣದೊಂದಿಗೆ ಸತ್ತವರ ಪುನರುತ್ಥಾನ ಮತ್ತು ಅಂತಿಮ ನ್ಯಾಯತೀರ್ಪಿನೊಂದಿಗೆ ಮುಕ್ತಾಯವಾಗುವುದು ಎಂಬ ನೋಟವಾಗಿದೆ. ಕೆಲವರು ಇದಕ್ಕೆ ಒಪ್ಪಿಕೊಳ್ಳುವದಿಲ್ಲ, ಸಾವಿರ ವರ್ಷಗಳು ಕ್ರೈಸ್ತ ಯುಗದ ಅನಂತರದ ಭಾಗದೊಳಗೆ ಸಮಾಧಾನ ಮತ್ತು/ಇಲ್ಲವೇ ನೀತಿಯ ದೀರ್ಘ ಅವಧಿಯ ಸಂಕೇತವಾಗಿದೆ, ಹಾಗೂ ಆ ಅವಧಿಯು ಯೇಸುವಿನ ಹಿಂದಿರುವಿಕೆಯಿಂದ ಹಿಂಬಾಲಿಸಲ್ಪಡುವುದೆಂದು ನಂಬುತ್ತಾರೆ.

*ಅಮಿಲ್ಲೆನ್ನಿಯಾಲಿಜಮ್* ಎಂಬುದು "ಒಂದು ಸಾವಿರ" ಸಂಖ್ಯೆಯು ಪರಿಪೂರ್ಣತೆಯ ಸಂಕೇತವಾಗಿದೆ ಮತ್ತು ಅಕ್ಷರಶಃವಾದ ಸಾವಿರ ವರ್ಷದ ಆಳ್ವಿಕೆಯಾಗಿರುವದಿಲ್ಲ ಎಂಬ ಅಭಿಪ್ರಾಯವಾಗಿದೆ. ಪೊಸ್ಟಮಿಲ್ಲೆನ್ನಿಯಲಿಸ್ಟರಂತೆ, ಈ ದುಷ್ಟಿಕೋನವನ್ನಿಟ್ಟುಕೊಂಡಿರುವವರು ಯೇಸುವಿನ ಹಿಂದಿರುಗುವಿಕೆಯಲ್ಲಿ, ಪುನರುತ್ಥಾನದಲ್ಲಿ ಮತ್ತು ಅಂತಿಮ ಸ್ಯಾಯ ತೀರ್ವಿಕೆಯಲ್ಲಿ ನಂಬುವರು.

*ಪ್ರಿಮಿಲ್ಲೆನ್ನಿಯಾಲಿಜಮ್* ಎಂಬುದು ಸತ್ತವರ ಸಾಮಾನ್ಯ ಪುನರುತ್ಥಾನಕ್ಕಿಂತ ಹಾಗೂ ನ್ಯಾಯ ತೀರ್ವಿಕೆಯ ದಿನಕ್ಕಿಂತ ಮೊದಲು ಯೇಸುವು ಭೂಲೋಕಕ್ಕೆ ಹಿಂದಿರುಗಿ ಬರುವನು, ಮತ್ತು ಒಂದು ಸಾವಿರ ವರ್ಷ ಯೆರೂಸಲೇಮಿನಲ್ಲಿ ದಾವೀದನ

ಸಿಂಹಾಸನದ ಮೇಲೆ ಆಳುವನು ಎಂಬ ದೃಷ್ಟಿಕೋನವಾಗಿದೆ. ಈ ದೃಷ್ಟಿಕೋನವನ್ನು ಹಿಂಬಾಲಿಸುವವರು ಕ್ರಿಸ್ತನ ಎರಡನೆಯ ಬರೋಣದೊಂದಿಗೆ ಸಂಬಂಧಿಸಿರುವ ಘಟನೆಗಳನ್ನು ಕುರಿತು ವಿಭಾಗವಾಗಿದ್ದಾರೆ. ಎರಡು ಪುನರುತ್ಥಾನಗಳು ಆಗುವವೆಂದು ಅವರೆಲ್ಲರೂ ನಂಬುತ್ತಾರೆ: "ಮಿಲ್ಲೆನ್ನಿಯಮ್"ದ *ಮೊದಲು* ಸತ್ತುಹೋದ ನೀತಿವಂತರ ಪುನರುತ್ಥಾನ, ಆಮೇಲೆ "ಮಿಲ್ಲೆನ್ನಿಯಮ"ದ *ನಂತರ* ಸತ್ತುಹೋದ ದುಷ್ಟರ ಪುನರುತ್ಥಾನ. ಈ ಗುಂಪಿನೊಳಗೆ ಡಿಸ್ಪೆನ್ಸೇಶನಲ್ಲಿಸ್ಟರು ಎಲ್ಲಾ ಪ್ರವಾದನೆಗಳು ಅಕ್ಷರಶಃ ಇಸ್ರಾಯೇಲಿಗೆ ಸಂಬಂಧಿಸಿರುವವು, ಸಭೆಗೆ ಅಲ್ಲ ಎಂದು ನಂಬುವರು, ಇಸ್ರಾಯೇಲಿನ ದೇವರ ಬಗ್ಗೆ ಅವರು ಯೇಚಿಸುವದಿಲ್ಲ. ಅವರಲ್ಲಿಯ ಐತಿಹಾಸಿಕ ಪ್ರಿಮಿಲ್ಲೆನ್ನಿಯಲಿಸ್ಟರು ಸಭೆಯನ್ನು ದೇವರ ಇಸ್ರಾಯೇಲಿನಂತೆ ಸ್ವೀಕರಿಸುತ್ತಾರೆ.

## ಪ್ರಕಟನೆ 20:1-10 ಏನನ್ನು ಹೇಳುವದಿಲ್ಲ

ಪ್ರಕಟನೆ 20:1-10ನ್ನು ಗಮನವಿಟ್ಟು ಓದಿದರೆ, ಪ್ರಿಮಿಲ್ಲೆನಿಯಲ್ ದೃಷ್ಟಿಕೋನದ ಮೂಲ ತತ್ವಗಳು ಈ ವಾಕ್ಯಭಾಗದಲ್ಲಿ ಕಾಣುವದಿಲ್ಲ ಎಂದು ನೋಡುತ್ತೇವೆ:

(1) ಯೇಸುವು ಭೂಲೋಕಕ್ಕೆ *ಹಿಂದಿರುಗಿ* ಬರುವದನ್ನು ಅದು ಹೇಳುವದಿಲ್ಲ. ಆತನ ಹಿಂದಿರುಗಿ ಬರುವಿಕೆಯು ಈ ವಾಕ್ಯಭಾಗದ ವಿಚಾರವಾಗಿರುವದಿಲ್ಲ.

(2) ಯೇಸುವು *ಭೂಲೋಕದ ಮೇಲೆ* ಆಳ್ವಿಕೆ ಮಾಡವನು ಎಂದು ಅದು ಹೇಳುವದಿಲ್ಲ. ಆಳ್ವಿಕೆಯ ಸ್ಥಳವು ನಮೂದಿಸಲ್ಪಟ್ಟಿರುವದಿಲ್ಲ.

(3) *ಯೇಸುವು* ಒಂದು ಸಾವಿರ ವರ್ಷದ ವರೆಗೆ ಆಳುವನೆಂದು ಅದು ಹೇಳುವದಿಲ್ಲ. ದೇವಭಕ್ತರ (ಪರಿಶುದ್ಧರ) ಆಳ್ವಿಕೆಯ ಅವಧಿ ಮಾತ್ರ ನಮೂದಿಸಲ್ಪಟ್ಟಿದೆ.

(4) ಹತಸಾಕ್ಷಿಗಳಾದ ಭಕ್ತರ ಆಳ್ವಿಕೆಯು *ಭೂಲೋಕದ* ಆಳ್ವಿಕೆಯಾಗಿರುವುದು ಎಂದು ಅದು ಹೇಳುವದಿಲ್ಲ. ಸ್ಥಳವು ಹೇಳಲ್ಪಟ್ಟಿರುವದಿಲ್ಲ.

(5) ಯೇಸುವಿನ ಎರಡನೆಯ ಬರೋದಣ ಬಗ್ಗೆ *ಯಾವುದನ್ನೂ* ಅದು ನಮೂದಿಸಿರುವದಿಲ್ಲ. ಇದು ಪ್ರಿಮಿಲ್ಲೆನ್ನಿಯಲಿಸ್ಟರಿಂದ ಕಲ್ಪಿಸಲ್ಪಟ್ಟಿದೆ.

(6) ಒಂದು ಸಾವಿರ ವರ್ಷಗಳ ಆಳ್ವಿಕೆಯು ಯೇಸುವಿನ ಎರಡನೆಯ ಬರೋಣದ *ನಂತರ* ಇರುವುದೆಂದು ಅದು ಹೇಳುವದಿಲ್ಲ. ಇದೂ ಕಲ್ಪಿಸಲ್ಪಟ್ಟಿದೆ.

(7) ಯೇಸುವು ಯೆರೂಸಲೇಮಿನಲ್ಲಿ ಆಳುವನು ಎಂದು ಅದು ಹೇಳುವದಿಲ್ಲ. *ಯೆರೂಸಲೇಮು* ನಮೂದಿಸಲ್ಪಟ್ಟಿರುವದಿಲ್ಲ.

(8) ಯೇಸುವು ದಾವೀದನ ಸಿಂಹಾಸನದ ಮೇಲೆ ಆಳುವನು ಎಂದು ಅದು ಹೇಳಿರುವದಿಲ್ಲ. *ದಾವೀದನ ಸಿಂಹಾಸನವು* ನಮೂದಿಸಲ್ಪಟ್ಟಿರುವದಿಲ್ಲ.

(9) *ಯೇಸುವಿನ ಸಿಂಹಾಸನದ* ಬಗ್ಗೆ ಅದು ಏನನ್ನೂ ನಮೂದಿಸಿರುವದಿಲ್ಲ. ಹತಸಾಕ್ಷಿಗಳ ಸಿಂಹಾಸನಗಳು ನಮೂದಿಸಲ್ಪಟ್ಟಿರುವಾಗ, ಯೇಸುವಿನ ಸಿಂಹಾಸನವು ನಮೂದಿಸಲ್ಪಟ್ಟಿರುವದಿಲ್ಲ. ದೇವಜನರು (ಪರಿಶುದ್ಧರು) ಇನ್ನು ಮುಂದೆ ಜಜ್ಜಲ್ಪಡುವರು, ಆದರೆ ಜನರಲ್ಲಿ ನಾಯಕರಾಗಿ ಗೌರವಿಸಲ್ಪಡುವರು ಮತ್ತು ಕ್ರಿಸ್ತನ ಸೇವಕರು ಎಂದು ತಿಳಿಯಲ್ಪಡುವರು ಎಂಬುದಕ್ಕೆ ಈ ಸಿಂಹಾಸನಗಳು ಸಂಕೇತಗಳಾಗಿರುವವು. ಈ ಆತ್ಮಿಕ ಅರ್ಥದಲ್ಲಿ ಸಾವಿರ ವರ್ಷದ ಅವಧಿಯಲ್ಲಿ ಅವರು ಆತನೊಂದಿಗೆ ಆಳ್ವಿಕೆ ಮಾಡುವರು; ಅಕ್ಷರಶಃವಾದ, ಭೂಲೋಕದ ಸಿಂಹಾಸನಗಳ ಮೇಲೆ ಅವರು ಆಳ್ವಿಕೆ ಮಾಡುವದಿಲ್ಲ.

(10) ದೇವಜನರಿಗೆ (ಪರಶುದ್ಧರಿಗೆ) ದೈಹಿಕ ಪುನರುತ್ಥಾನವಿರುವುದೆಂದು ಅದು

ಹೇಳುವದಿಲ್ಲ. ಅವರ ಪ್ರಾಣಗಳು ಮಾತ್ರವೇ ನಮೂದಿಸಲ್ಪಟ್ಟಿವೆ.

(11) ಸತ್ತುಹೋದ ನೀತಿವಂತ*ರೆಲ್ಲರೂ* ಕ್ರಿಸ್ತನೊಂದಿಗೆ ಆಳ್ವಿಕೆ ಮಾಡುವರು ಎಂದು ಅದು ಹೇಳುವದಲ್ಲಿ. ಹತಸಾಕ್ಷಿಗಳಾದ ದೇವಜನರು (ಪರಿಶುದ್ಧರು) ಆಳುವರು ಎಂದು ಹೇಳಲ್ಪಟ್ಟಿದೆ.

(12) *ಅರ್ಮಗೆದ್ದೋನ ಯುದ್ಧದ* ಬಗ್ಗೆ ಅದು ಏನನ್ನೂ ನಮೂದಿಸಿರುವದಿಲ್ಲ, ದೇವಜನರ (ಪರಿಶುದ್ಧರ) ಸಮೂಹಕ್ಕೆ ವಿರುದ್ಧವಾಗಿ ಯುದ್ಧವನ್ನು ಪ್ರಾರಂಭಿಸಲು ನೋಡುತ್ತಿದ್ದ ಸೈತಾನನ್ನು ತಡೆಯುವದಕ್ಕಾಗಿ ದೇವರು ಪರಲೋಕದಿಂದ ಬೆಂಕಿ ಮಳೆಯನ್ನು ಸುರಿಸುವನು. ಅಲ್ಲಿ ನಿಜವಾಗಿಯೂ ಯುದ್ಧವಾಗುವುದೆಂದು ಪ್ರಕಟನೆ 16:16 ಹೇಳುವುದೂ ಇಲ್ಲ: ಅಲ್ಲಿ ಸೈನ್ಯಗಳು ಕೂಡಿವೆ ಎಂದಷ್ಟೇ ನಮೂದಿಸುತ್ತದೆ: “ಆ ದೆವ್ವಗಳು ಭೂರಾಜರನ್ನು ಇಬ್ರಿಯ ಭಾಷೆಯಲ್ಲಿ ಹರ್ಮಗೆದೋನ್ ಎಂಬ ಹೆಸರುಳ್ಳ ಸ್ಥಳಕ್ಕೆ ಕೂಡಿಸಿದವು.”

ಈ ವಾಕ್ಯಭಾಗವು ಮೃಗವನ್ನು ಆರಾಧಿಸದ ಹತಸಾಕ್ಷಿಗಳ ಪ್ರಾಣಗಳ ಬಗ್ಗೆ ಮಾತಾಡುತ್ತದೆ (ವಚನ 4). ಒಂದು ಸಾವಿರ ವರ್ಷಗಳಿಗಾಗಿ ಯೇಸುವಿನೊಂದಿಗೆ ಆಳುವವರಂತೆ ವಿವರಿಸಲ್ಪಟ್ಟವರು ಅವರೇ ಆಗಿದ್ದಾರೆ. ಯೇಸುವು ಎಷ್ಟು ಕಾಲ ಆಳುವನು ಎಂಬುದರ ಬಗ್ಗೆ ಏನೂ ಹೇಳಲ್ಪಟ್ಟಿರುವದಿಲ್ಲ - ಆತನೊಂದಿಗೆ ಹತಸಾಕ್ಷಿಗಳು ಎಷ್ಟು ಕಾಲ ಆಳುವರು ಎಂಬುದು ಮಾತ್ರವೇ ಹೇಳಲ್ಪಟ್ಟಿದೆ. ನನ್ನ ಒಬ್ಬ ಸಂಬಂಧಿಯು ಎರಡು ವರ್ಷಗಳ ವರೆಗೆ ನನ್ನ ಮನೆಯಲ್ಲಿ ನನ್ನೊಂದಿಗೆ ಇದ್ದನು ಎಂದು ನನ್ನ ಸ್ನೇಹಿತನಿಗೆ ನಾನು ಹೇಳಬಹುದು. ಈ ಹೇಳಿಕೆಯಿಂದ ಅವನು ನನ್ನ ಬಂಧುವು ನನ್ನೊಂದಿಗೆ ಎಷ್ಟು ಸಮಯ ಇದ್ದನು ಎಂಬುದನ್ನು ತಿಳಿದುಕೊಳ್ಳುತ್ತಾನೆ, ಆದರೆ ಮನೆಯಲ್ಲಿ ನಾನು ಎಷ್ಟು ಸಮಯ ಇದ್ದೆನು ಎಂಬುದನ್ನು ತಿಳಿದುಕೊಳ್ಳುವದಿಲ್ಲ. ಇದು ಯೇಸುವಿನ ಆಳ್ವಿಕೆಯ ಬಗೆಗೂ ಸತ್ಯವಾಗಿರುತ್ತದೆ. ಈ ವಾಕ್ಯದಿಂದ ಒಬ್ಬನು ಯೇಸುವು ಕಡಿಮೆ ಪಕ್ಷ ಒಂದು ಸಾವಿರ ವರ್ಷಗಳವರೆಗೆ ಆಳುವನು, ಅದಕ್ಕಿಂತ ಕಡಿಮೆ ಅಲ್ಲ ಎಂದು ತಿಳಿದು ಕೊಳ್ಳುವನು; ಹೀಗಿದ್ದರೂ ಹೇಳಿಕೆಯು ಆತನ ಆಳ್ವಿಕೆಯನ್ನು ಕೇವಲ ಒಂದು ಸಾವಿರ ವರ್ಷಗಳಿಗೆ ಮಾತ್ರ ನೇಮಿತಗೊಳಿಸುವದಿಲ್ಲ. ಆತನ ಆಳ್ವಿಕೆಯು ಒಂದು ಸಾವಿರ ವರ್ಷಗಳವರೆಗೆ, ಈ ವಾಕ್ಯವು ಸಂಬಂಧಿಸಿದಂತೆ ಇರಬಹುದು. ಪ್ರಕಟನೆ 20ರಿಂದ ನಾವು ಹತಸಾಕ್ಷಿಗಳಾದ ದೇವಜನರ (ಪರಿಶುದ್ಧರ) ಆಳ್ವಿಕೆಯ ಅವಧಿಯ ಬಗ್ಗೆ ತಿಳಿದು ಕೊಳ್ಳುತ್ತೇವೆಯೇ ಹೊರತು ಯೇಸುವಿನ ಆಳ್ವಿಕೆಯ ಅವಧಿಯನ್ನಲ್ಲ.

## ಇತರ ಪರಿಶುದ್ಧ ಬರಹಗಳು ಏನನ್ನು ಹೇಳುತ್ತವೆ

ಪ್ರಕಟನೆಯು ಹೆಚ್ಚು ಸಾಂಕೇತಿಕ ಭಾಷೆಯನ್ನು ಉಪಯೋಗಿಸುವದರಿಂದ, ಪುಸ್ತಕದ ಯಾವುದೇ ವ್ಯಾಖ್ಯಾನವು ಪರಿಶುದ್ಧ ಬರಹದ ವಾಕ್ಯಭಾಗಗಳ ಅಕ್ಷರಶಃ ಬೋಧನೆ ಯೊಂದಿಗೆ ಸಾಮರಸ್ಯವುಳ್ಳದ್ದಾಗಿರತಕ್ಕದ್ದು ಮತ್ತು ತದ್ವಿರುದ್ಧವಾದದ್ದಾಗಿರಬಾರದು. ಪ್ರಕಟನೆ 20ನ್ನು ಬೈಬಲಿನ ಇತರ ಸರಳ ಬೋಧನೆಯೊಂದಿಗೆ ಯಾವುದೇ ವ್ಯಾಖ್ಯಾನವು ಸಮಂಜಸವಾಗಿರದಿದ್ದರೆ ಅದು ಸುಳ್ಳು ಬೋಧನೆಯಾಗಿದೆ. ಆದುದರಿಂದ, “ಯೇಸು ವಿನ ಆಳ್ವಿಕೆಯ ಬಗ್ಗೆ ಇತರ ಪರಿಶುದ್ಧ ಬರಹಗಳು ಏನು ಹೇಳುತ್ತವೆ?” ಎಂಬ ಪ್ರಶ್ನೆ ಕೇಳೋಣ.

*ರೋಮನ್‌ರ ಆಳ್ವಿಕೆಯ ದಿನಗಳಲ್ಲಿ ದೇವರ ರಾಜ್ಯವು ಸ್ಥಾಪಿಸಲ್ಪಡುವುದೆಂದು ಪ್ರವಾದನೆಯು ಮುಂತಿಳಿಸಿತು (ದಾನಿಯೇಲ 2:44).* ನೆಬೂಕದ್ನೆಚ್ಚರನ ಕನಸಿನಲ್ಲಿಯ

ನಾಲ್ಕು ರಾಜ್ಯಗಳು, ಬಬಿಲೋನಿಯ, ಮೆಡೂ-ಪರ್ಸೀಯ, ಗ್ರೀಕ ಮತ್ತು ರೋಮನ್ ರಾಜ್ಯಗಳು. ಕನಸಿನಲ್ಲಿ ಪಾದಗಳು ಮತ್ತು ಕಾಲ್ಬೆರಳುಗಳು ಮಣ್ಣಿನಿಂದ ಮಿಶ್ರಗೊಂಡ ಕಬ್ಬಿಣದಂತೆ ಚಿತ್ರಿಸಲ್ಪಟ್ಟಿವೆ. ಕನಸಿನ ಬಗ್ಗೆ ದಾನಿಯೇಲನ ವಿವರಣೆಯಂತೆ ಈ ಮಿಶ್ರಣವು ಕೆಲವು ರಾಜ್ಯಗಳು ಬಲವುಳ್ಳವುಗಳಾಗಿರುವವು ಮತ್ತು ಕೆಲವು ಸುಲಭವಾಗಿ ಒಡೆಯುವವು ಎಂಬುದನ್ನು ಸೂಚಿಸಿತು (ದಾನಿಯೇಲ 2:42). ಈ ಭಾಗಗಳು "ಮಾನವ ಸಂತತಿ ಸಂಬಂಧದಿಂದ ಒಂದಕ್ಕೊಂದು ಬೆರೆತು ಕೊಳ್ಳುವವು," ಆದರೆ ಅವು "ಒಂದಕ್ಕೊಂದು ಅಂಟಿಕೊಳ್ಳುವದಿಲ್ಲ" (ದಾನಿಯೇಲ 2:43). ಇದು ರೋಮನ್ ಸಾಮ್ರಾಜ್ಯದ ಉತ್ತಮ ವರ್ಣನೆಯಾಗಿದೆ. ರೋಮನ್ ಆಡಳಿತಗಾರರ ದಿನಗಳಲ್ಲಿ ದೇವರ ರಾಜ್ಯವು ಪ್ರಾರಂಭವಾಗುವುದೆಂಬುದು ಈ ಪ್ರವಾದನೆಯ ಅರ್ಥವಾಗಿದೆ.

*ರಾಜ್ಯವು ಬರುವದಕ್ಕಾಗಿ ಸಿದ್ಧತೆಯು ಮಾಡಲ್ಪಟ್ಟದ್ದು, ಅದು ರೋಮನ್ ಆಡಳಿತಗಾರರ ದಿನಗಳಲ್ಲಿ ಸ್ಥಾಪಿಸಲ್ಪಡುವದೆಂದು ಅರ್ಥ ಕೊಡುವುದು.* ಯೇಸುವು, ರೋಮ್ ಅಧಿಕಾರದಲ್ಲಿದ್ದಾಗ ಭೂಲೋಕದಲ್ಲಿ ಜೀವಿಸಿದಾತನು, "ಕಾಲ ಪರಿಪೂರ್ಣವಾಯಿತು, ದೇವರ ರಾಜ್ಯವು ಸಮೀಪಿಸಿತು" ಎಂದು ಸಾರಿದನು (ಮಾರ್ಕ 1:15). "ಕಾಲ ಪರಿಪೂರ್ಣವಾಯಿತು" ಎಂದು ಹೇಳುವದರಿಂದ, ಪ್ರವಾದಿಗಳಿಂದ ಹೇಳಲ್ಪಟ್ಟ ಎಲ್ಲಾ ಸಮಯವು ದಾಟಿ ಹೋಯಿತು ಮತ್ತು ದೇವರ ರಾಜ್ಯವು ಪ್ರಾರಂಭವಾಗಲು ಈಗ ಸಮಯವು ತಲುಪಿದೆ ಎಂದು ಯೇಸು ಬೋಧಿಸಿದನು. ರಾಜ್ಯವು ಸಮೀಪಿಸಿದೆ ಎಂದು ಬಾಪ್ಟಿಸ್ಟ್ ಯೋಹಾನನು ಪ್ರಸಂಗಿಸಿದನು (ಮತ್ತಾಯ 3:2). ಯೇಸುವು ಹನ್ನೆರಡು ಜನರಿಗೆ (ಮತ್ತಾಯ 10:7) ಮತ್ತು ಎಪ್ಪತ್ತು ಜನರಿಗೆ (ಲೂಕ 10:9, 11) ರಾಜ್ಯವು ಸಮೀಪವಾಗಿದೆ ಎಂದು ಪ್ರಸಂಗಿಸಲು ನಿರ್ದೇಶಿಸಿದನು. ರಾಜ್ಯವು ಬಲದೊಂದಿಗೆ ಬರುವದನ್ನು ನೋಡುವವರೆಗೆ ಕೆಲವರು ಮರಣವನ್ನು ಸವಿಯುವುದೇ ಇಲ್ಲ ಎಂದೂ ಯೇಸು ಹೇಳಿದನು (ಮಾರ್ಕ 9:1). ರೋಮ್ ಸಾಮ್ರಾಜ್ಯದ ದಿನಗಳಲ್ಲಿ ರಾಜ್ಯವು ಸ್ಥಾಪಿಸಲ್ಪಟ್ಟಿರದಿದ್ದರೆ, ದಾನಿಯೇಲ, ಯೋಹಾನ, ಯೇಸು, ಹನ್ನೆರಡು ಜನರು ಮತ್ತು ಎಪ್ಪತ್ತು ಜನರು ಎಲ್ಲರೂ ಸುಳ್ಳು ಪ್ರವಾದಿಗಳಾಗಿದ್ದಾರೆ (ಧರ್ಮೋಪದೇಶಕಾಂಡ 18:22). ಇವರು ಸುಳ್ಳು ಪ್ರವಾದಿಗಳಾಗಿದ್ದರೆ, ಆಗ ಎಲ್ಲಾ ಕ್ರೈಸ್ತತ್ವವು ತಪ್ಪಾಗಿ ತಿಳಿಯಲ್ಪಡುತ್ತದೆ ಮತ್ತು ಯೋಚಿಸುವದಕ್ಕಾಗಿ ಅಯೋಗ್ಯವಾದದ್ದಾಗುತ್ತದೆ.

ಯಾವುದೇ ಪದ್ಧತಿಯು ಕ್ರಿಸ್ತನ ಮೊದಲನೆಯ ಬರೋಣವನ್ನು ಒಂದು ನೋಲಿನಂತೆ ಮಾಡಿದರೇ - ಕ್ರಿಸ್ತನು ತಾನು ವಾಗ್ದಾನ ಮಾಡಿದಂತೆ ಮತ್ತು ಆತನ ಶಿಷ್ಯರು ಪ್ರಸಂಗಿಸಿದಂತೆ - ತನ್ನ ರಾಜ್ಯದ ಮೇಲೆ ಆಳ್ವಿಕೆ ನಡಿಸಲು ದಿವಾರೋಹಣನಾಗಿರದಿದ್ದರೆ - ಅದು ಸುಳ್ಳಾಗಿರತಕ್ಕದ್ದು. ಮೊದಲನೆಯ ಸಲ ಆತನು ಸೋತು ಹೋಗಿದ್ದರೆ ಆತನು ಪುನಃ ಬಂದರೆ ಆತನು ಬಯಿಸುವನೆಂದು ನಾವು ಯಾಕೆ ನಿರೀಕ್ಷಿಸಬೇಕು?

*ಪರಲೋಕ ಮತ್ತು ಭೂಲೋಕದ ಮೇಲೆ ತನ್ನ ಅಧಿಕಾರ ನಡಿಸುವದಕ್ಕೆ ದೇವರ ಬಲಗಡೆಗೆ ಏರಿಹೋದಾಗ ಯೇಸುವಿನ ಆಳ್ವಿಕೆಯ ವಾಸ್ತವಿಕತೆಯು ಪ್ರಾರಂಭವಾಯಿತು.*[1] ಮನುಷ್ಯ ಕುಮಾರನಂತಿರುವವನು ಮಹಾವೃದ್ಧನನ್ನು ಸಮೀಪಿಸಲು ಏರಿಹೋದ ಮತ್ತು ನಿತ್ಯರಾಜ್ಯವನ್ನು ಹೊಂದಿಕೊಳ್ಳುವ ದಾನಿಯೇಲನ ಪ್ರವಾದನೆಯನ್ನು ಇದು ನೆರವೇರಿಸಿತು (ದಾನಿಯೇಲ 7:13, 14). ಯೇಸುವು ಬೋಧಿಸಿದಾಗ, ತನ್ನ ರಾಜ್ಯವನ್ನು ಪಡೆದವನಾಗಿ ಹಿಂದಿರುಗಿ ಬರುವ ಶ್ರೀಮಂತನಾದ ಮನುಷ್ಯರಿಗೆ ತನ್ನನ್ನು ಹೋಲಿಸಿಕೊಂಡು ಶ್ರೀಮಂತ - ಮನುಷ್ಯನ ಸಾಮ್ಯವನ್ನು ಹೇಳಿದನು (ಲೂಕ 19:12-15). ಯೇಸುವು ಹೊರಟು ಹೋದಾಗ, ಆತನು ತನ್ನ ರಾಜ್ಯವನ್ನು ಪಡೆದು ಕೊಳ್ಳಲು ಹೋದನು.

ಒಂದು ಭೂಲೋಕದ ರಾಜ್ಯವನ್ನು ಆಳುವದನ್ನು ಯೇಸುವಿನಿಂದ ನಿರೀಕ್ಷಿಸುವವರು ಆತನ ರಾಜ್ಯದ ಗುಣವನ್ನು ಅರ್ಥಮಾಡಿಕೊಳ್ಳಲಾರರು. ಯೇಸುವು ತನ್ನ ರಾಜ್ಯವು ಈ ಲೋಕದ್ದು ಅಲ್ಲ ಎಂದು ಹೇಳಿದನು (ಯೋಹಾನ 18:36). ಆತನ ಆಳ್ವಿಕೆಯು ಭೂಲೋಕದ ಆಳ್ವಿಕೆಯಾಗಿರುವದಿಲ್ಲವಾದುದರಿಂದ, ಅದು ಪರಲೋಕದ ಆಳ್ವಿಕೆಯಾಗಿರುತಕ್ಕದ್ದು.

"ಹೀಗೆ, ಆತನು ತನ್ನ ಸಿಂಹಾಸನದ ಮೇಲೆ ಯಾಜಕನಾಗಿ ಕುಳಿತು ಕೊಳ್ಳುವನು" ಎಂದು ಜೆಕರ್ಯನು ಯೇಸುವನ್ನು ಕುರಿತು ಪ್ರವಾದನೆ ಹೇಳಿದನು (ಜೆಕರ್ಯ 6:13). "ಈತನು ಇನ್ನೂ ಭೂಮಿಯ ಮೇಲೆ ಇದ್ದದ್ದೇ ಆದರೆ ಯಾಜಕನಾಗಿರುತ್ತಿರಲಿಲ್ಲ" ಎಂದು ಇಬ್ರಿಯ 8:4 ಹೇಳುತ್ತದೆ. ಆತನು ಭೂಮಿಯ ಮೇಲೆ ಯಾಜಕನಾಗಿರದಿದ್ದರೆ, ಆತನು ಭೂಮಿಯ ಮೇಲೆ ಆಳ್ವಿಕೆ ಮಾಡಲಾರನು, ಯಾಕಂದರೆ ಆತನು ತನ್ನ ಸಿಂಹಾಸನದ ಮೇಲೆ ಯಾಜಕನಾಗಿರುವನು ಎಂದು ಪ್ರವಾದನೆಯು ಘೋಷಿಸುತ್ತದೆ. ಆತನು ಭೂಮಿಯ ಮೇಲೆ ಯಾಜಕನಾಗಲಾರದ್ದರಿಂದ, ಆತನು ಯಾಜಕನಾಗಿರುವಂಥ ಒಂದೇ ಸ್ಥಳವು ಪರಲೋಕ; ಆದುದರಿಂದ ಆತನು ಪರಲೋಕದ ಸಿಂಹಾಸನದ ಮೇಲೆ ಆಳ್ವಿಕೆ ಮಾಡುವನು. ಆತನು ಏರಿಹೋದ ಸ್ಥಳವು ಪರಲೋಕವೇ ಹಾಗೂ ಅಲ್ಲಿ ಈಗ ಆಳುತ್ತಿರುವನು (1 ಪೇತ್ರ 3:22).

ದೇವರ ರಾಜ್ಯವು ಭೂಲೋಕದ ರಾಜ್ಯದಂತೆ ತಿನ್ನುವುದೂ ಕುಡಿಯುವುದೂ ಅಲ್ಲ, ಆದರೆ ಅದು ಪರಿಶುದ್ಧಾತ್ಮನಲ್ಲಿ ನೀತಿಯ, ಸಮಾಧಾನದ ಮತ್ತು ಆನಂದದ ರಾಜ್ಯವಾಗಿರುವದೆಂದು ಪೌಲನು ಬರೆದನು (ರೋಮಾಪುರ 14:17), ಕ್ರೂರ ಮೃಗಗಳು ಸಾಧು ಪ್ರಾಣಿಗಳೊಂದಿಗೆ ಸಮಾಧಾನದಿಂದ ಜೀವಿಸುವ ಅಲಂಕಾರಿಕ ಪ್ರವಾದನೆಯಲ್ಲಿ ಚಿತ್ರಿಸಿದಂಥ ಸಮಾಧಾನದ ರಾಜ್ಯವಾಗಿರುವುದು (ಯೆಶಾಯ 11:6, 7). ರಾಜ್ಯದಂತೆ ಅದು, ನೀತಿಗಾಗಿ ಹಿಂಸಿಸಲ್ಪಟ್ಟವರಿಗಾಗಿರುವುದು (ಮತ್ತಾಯ 5:10).

ರಾಜ್ಯವು ಜಾಗತಿಕ ಮಹಾಯುದ್ಧದೊಂದಿಗೆ ಪ್ರಾರಂಭಿಸಲ್ಪಡಬೇಕಾಗಿರಲಿಲ್ಲ, ಆದರೆ ಚಿಕ್ಕದಾಗಿ, ಸಾಸಿವೆಕಾಳು ಪ್ರಾರಂಭಿಸುವಂತೆ, ಮತ್ತು ಕಣಕದಲ್ಲಿ ಅಡಗಿರುವ ಹುಳಿಯು ಮಾಡುವಂತೆ ಸದ್ದಿಲ್ಲದೆ ತನ್ನ ವಾತಾವರಣದ ಮೇಲೆ ಪ್ರಭಾವ ಬೀರುವಂತೆ, ಪ್ರಾರಂಭಿಸಲ್ಪಡುವುದು (ಮತ್ತಾಯ 13:31-33). ಖಡ್ಗವಲ್ಲ ಇಲ್ಲವೇ ಬೇರೆ ಯುದ್ಧದ ಆಯುಧಗಳಲ್ಲ, ಆದರೆ ದೇವರ ವಾಕ್ಯವು ಅದರ ವಿಸ್ತರಣೆಯ ಹಾಗೂ ಬೆಳವಣಿಗೆಯ ತಳಹದಿಯಾಗಿರುವುದು (ಮತ್ತಾಯ 13:19; ಲೂಕ 8:11). ಅದು ವಿಸ್ತರಿಸುತ್ತ ಹೋಗುವ ಮಾರ್ಗವು ಇದಾಗಿರುವುದು. ಯಾಕಂದರೆ ಅದು ಮಾನವನ ಹೃದಯದೊಳಗೆ ದೇವರ ಆಳ್ವಿಕೆಯಾಗಿರುವುದು; ಭೂಲೋಕದ ಸರಕಾರದ ಮುಖಾಂತರ ದೇವರ ಆಳ್ವಿಕೆಯಾಗಿರುವದಿಲ್ಲ. "ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥದಲ್ಲ. ಇಗೋ ಇಲ್ಲಿ ಇದೆ, ಅಗೋ ಅಲ್ಲಿ ಅದೆ ಎಂದು ಹೇಳುವದಕ್ಕಾಗದು; ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ" (ಲೂಕ 17:20, 21; NIV).

ಪೌಲನು ಕೊಲೊಸ್ಸೆಯವರಿಗೆ ಬರೆದಾಗ ದೇವರ ರಾಜ್ಯವು ಅಸ್ತಿತ್ವದಲ್ಲಿತ್ತು. ದೇವರು ಕ್ರಿಸ್ತರನ್ನು ಕತ್ತಲೆಯೊಳಗಿಂದ ಬಿಡಿಸಿ, ಯೇಸುವಿನ ರಾಜ್ಯದೊಳಗೆ ಬದಲಾಯಿಸಿರುವನೆಂದು ಅವನು ಹೇಳಿದನು (ಕೊಲೊಸ್ಸೆ 1:13), ಯೇಸುವಿನ ರಾಜ್ಯವು ಅಸ್ತಿತ್ವದಲ್ಲಿರದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ: ದೇವರನ್ನು ಬಿಟ್ಟು, ಎಲ್ಲಾ ಸಂಗತಿಗಳು ಆಗಲೇ ಯೇಸುವಿನ ಅಡಿಯಲ್ಲಿ ಇಡಲ್ಪಟ್ಟಿವೆ (1 ಕೊರಿಂಥ 15:26-28). ಈಗಿನ ಯುಗದಲ್ಲಿ, ಕ್ರೈಸ್ತ ಯುಗದಲ್ಲಿ, ನಾವು ಯೇಸುವಿನ ರಾಜ್ಯದ ಸದಸ್ಯರು ಆಗಬಹುದು (ಯೋಹಾನ 3:3-5) ಪರಲೋಕ ಭೂಲೋಕಗಳಲ್ಲೆಲ್ಲಾ ವಿಸ್ತರಿಸುವ

ರಾಜ್ಯವಾಗಿರುವುದು (ಮತ್ತಾಯ 28:18).

ಆತನ ಹಿಂದಿರುಗಿ ಬರುವಿಕೆಯಲ್ಲಿ, ಯೇಸುವು ತನ್ನ ಆಳ್ವಿಕೆಯನ್ನು ಪ್ರಾರಂಭಿಸುವದಕ್ಕೆ ಬರುವದಿಲ್ಲ, ಯಾಕಂದರೆ ಎಲ್ಲರ ಮೇಲೆ ಈಗ ಆಳುತ್ತಿರುವನು (1 ಕೊರಿಂಥ 15:27). ಆತನು ಪುನಃ ಬರುವಾಗ, ಆತನು ಸತ್ತವರನ್ನು ಎಬ್ಬಿಸುವನು, ತನ್ನ ಆಳ್ವಿಕೆಯನ್ನು ಮುಕ್ತಾಯ ಗೊಳಿಸುವನು ಮತ್ತು ರಾಜ್ಯವನ್ನು ತಂದೆಗೆ ಒಪ್ಪಿಸುವನು (1 ಕೊರಿಂಥ 15:22-28).

ಈಗ ಯೇಸುವು ಪರಲೋಕ, ಭೂಲೋಕಗಳ ಮೇಲೆ ಆಡಳಿತೆ ನಡಿಸುತ್ತಿರುವನೆಂದು ಪರಿಶುದ್ಧ ಬರಹವು ಸ್ಪಷ್ಟವಾಗಿ ಬೋಧಿಸುತ್ತಲಿದೆ. ಆತನು ಹಿಂದಿರುಗಿ ಬರುವವರೆಗೆ ಆಳಿಕೆ ಮಾಡುವನು; ಆಗ ಅಂತ್ಯವು ಬರುವುದು (1 ಕೊರಿಂಥ 15:24-27). ಅಂಥ ಈಗಿನ ಆಳ್ವಿಕೆಯು ಯೇಸುವಿಗೆ ಆಳ್ವಿಕೆ ಮಾಡಲು ಭೂಮಿಯ ಮೇಲೆ ಒಂದು ಸಾವಿರ ವರುಷಗಳನ್ನು ಉಳಿಸುವದಿಲ್ಲ. ಒಂದು ಸಾವಿರ ವರ್ಷಕ್ಕಾಗಿ ಆಳ್ವಿಕೆ ಮಾಡಲು ಭೂಲೋಕಕ್ಕೆ ಯೇಸುವು ಹಿಂದಿರುಗಿ ಬರುವನೆಂದು ಬೈಬಲಿನಲ್ಲಿ ಎಲ್ಲಿಯೂ ಹೇಳಲ್ಪಟ್ಟಿರುವದಿಲ್ಲ. ಆತನು ತನ್ನ ಪುನರುತ್ಥಾನದ ನಂತರ ತಂದೆಯ ಬಳಿಗೆ ಹಿಂದಿರುಗಿದಾಗ ಆತನ ಆಳ್ವಿಕೆ ಪ್ರಾರಂಭವಾಯಿತು. ಎಷ್ಟೋ ಪರಿಶುದ್ಧ ಬರಹಗಳನ್ನು ಮೀರಿ ಹೋಗುವ ಯಾವುದೇ ಕಲ್ಪನೆಯ ವ್ಯಾಖ್ಯಾನವೂ ಸುಳ್ಳಾಗಿರತಕ್ಕದ್ದು.

## ಪ್ರಕಟನೆ 20:1-10 ಯಾವ ಅರ್ಥ ಕೊಡುವುದು

ಪ್ರಕಟನೆ 20:1-10ರ ಅರ್ಥದ ಬಗ್ಗೆ ಇರುವ ಪ್ರತಿಯೊಂದರ ಬಗ್ಗೆ ನಾವು ಅನಿಶ್ಚಿತತೆಯೊಂದಿಗೆ ಇರಬಹುದಾಗಿದ್ದರೂ, ವಾಕ್ಯಭಾಗವು ಏನು ಹೇಳುವದಿಲ್ಲ ಎಂಬುದರ ಬಗ್ಗೆ ನಮಗೆ ನಿಶ್ಚಿತತೆಯಿದೆ. ಯೆರೂಸಲೇಮಿನಲ್ಲಿ ದಾವೀದನ ಅಕ್ಷರಶಃವಾದ ಸಿಂಹಾಸನದ ಮೇಲೆ ಒಂದು ಸಾವಿರ ವರ್ಷ ಆಳ್ವಿಕೆ ಮಾಡಲು ಆತನು ಬರುವನು ಎಂದು ಅದು ಹೇಳುವದಿಲ್ಲ.

ಈ ಮೂಲಪಾಠವು ಸಾಂಕೇತಿಕವಾಗಿ ವ್ಯಾಖ್ಯಾನಿಸಲ್ಪಡತಕ್ಕದ್ದು ಆದರೆ ಅಕ್ಷರಶಃವಾಗಿ ಅಲ್ಲ. ಆತ್ಮಿಕ ಜೀವಿಯಾಗಿರುವ ಸೈತಾನನನ್ನು ಅಕ್ಷರಶಃವಾದ ಬೀಗದಕೈ ಮತ್ತು ಸರಪಣಿಯಿಂದ ಬಂಧಿಸಬಹುದು? ಪ್ರಾಣಗಳು ಅಕ್ಷರಶಃ ಸಿಂಹಾಸನದ ಮೇಲೆ ಕುಳಿತುಕೊಳ್ಳಬಹುದೋ? ಇಡೀ ಪ್ರಕಟನೆ ಗ್ರಂಥವು ಸಾಂಕೇತಿಕ ಭಾಷೆಯಿಂದ ತುಂಬಿಕೊಂಡಿರುತ್ತದೆ. ಈ ಅಧ್ಯಾಯವು ಯಾಕೆ ಭಿನ್ನವಾದದ್ದಾಗಿ ಯೋಚಿಸಲ್ಪಡಬೇಕು?

ಈ ವಾಕ್ಯಭಾಗದ ಅರ್ಥವು ಮೊದಲು ಪ್ರಕಟನೆಯಲ್ಲಿ (6:9-11) ವಿವರಿಸಲ್ಪಡಲು ಪ್ರಾರಂಭವಾಗಿರಬೇಕು. ಯಜ್ಞವೇದಿಯ ಕೆಳಗಿರುವ ಪ್ರಾಣಗಳು 20:4ರಲ್ಲಿ ಸಿಂಹಾಸನದ ಮೇಲಿರುವಂತೆ ವಿವರಿಸಲ್ಪಟ್ಟು ಅದೇ ಗುಂಪಿನಂತಿರ ಬಹುದು, ಅದರ ರಕ್ತಕ್ಕೆ ಪ್ರತಿದಂಡನೆಯಾಗುವುದು ಎಲ್ಲಿಯವರೆಗೆ ಇರುವುದು ಎಂದು ಅವರು ಪ್ರಶ್ನೆ ಕೇಳುವರು (6:10). ಇದು ಸಂಭವಿಸುವದಕ್ಕಿಂತ ಮೊದಲು ಸ್ವಲ್ಪಕಾಲ ವಿಶ್ರಮನೆಕೊಳ್ಳ ಬೇಕೆಂದು ಅವರಿಗೆ ಉತ್ತರವಾಗಿ ಹೇಳಲ್ಪಟ್ಟಿತು (6:11). ದೇವಜನರ (ಪರಿಶುದ್ಧರ) ರಕ್ತವನ್ನು ಕುಡಿದ (17:5, 6, 18) ಮತ್ತು ಜನಾಂಗಗಳ ಮೇಲೆ ಆಳ್ವಿಕೆ ಮಾಡಿದ (17:15) ದೊಡ್ಡ ಪಟ್ಟಣವಾದ (17:18) ಬಬಿಲೋನಿನ ಪತನದೊಂದಿಗೆ (18:2) ಅವರ ರಕ್ತಕ್ಕೆ ಪ್ರತೀಕಾರ ತೋರಿಸಿಕೊಳ್ಳಲ್ಪಟ್ಟಿದೆ ಎಂಬುದಾಗಿ ಹೇಳಲ್ಪಟ್ಟಿದೆ (19:1, 2). ಬಹಳ ವಾಗಿ ಹಿಂಸಿಸುವ ಈ ಪಟ್ಟಣ, ಸ್ಪಷ್ಟವಾಗಿ ರೋಮ್ ಪತನವಾದ ತರುವಾಯ (17:9,

18) ಕ್ರೈಸ್ತರು ಏನನ್ನು ನಿರೀಕ್ಷಿಸಬಹುದು? ಅಧ್ಯಾಯ 20 ಉತ್ತರವನ್ನು ಕೊಡುತ್ತದೆ. ಸೈತಾನನು ದೀರ್ಘಸಮಯದ ಅವಧಿಯ ವರೆಗೆ ಬಂಧಿಸಲ್ಪಡುವನು, ಹಾಗೂ "ಯಜ್ಞವೇದಿಯ ಕೆಳಗೆ" ಹಿಂಸಿಸಲ್ಪಡುವದರ ಬದಲು ದೇವಜನರು (ಪರಿಶುದ್ಧರು) "ಸಿಂಹಾಸನಗಳ" ಮೇಲೆ ಆಳ್ವಿಕೆ ನಡಿಸುವರು.

ಸೈತಾನನ್ನು ಬಂಧಿಸುವುದು ಅಂದರೇನು? ಅವನ ಬಿಡುಸುವಿಕೆಯು ಅವನ ಬಂಧಿಸುವಿಕೆಯ ವಿರುದ್ಧವಾದದ್ದಾಗಿರುವುದು. ಬಿಡಿಸಲ್ಪಟ್ಟಾಗ ಅವನು ಕೂಡಲೇ ಜನಾಂಗಗಳನ್ನು ಕೂಡಿಸಿ ಅವರನ್ನು ದೇವಜನರ (ಪರಿಶುದ್ಧರ) ದಂಡಿಗೆ ವಿರುದ್ಧವಾಗಿ ತರುವನು (20:7-9). ಅವನು ಬಂಧಿಸಲ್ಪಟ್ಟಿರುವುದು ಅಂದರೆ ಒಂದು ಸಾವಿರ ವರ್ಷಗಳ ವರೆಗೆ, ಬಂಧಿಸಲ್ಪಡುವದಕ್ಕಿಂತ ಮೊದಲು ಅವನು ಮಾಡಿದಂತೆ, ಒಂದು ಸಾವಿರ ವರ್ಷಗಳ ವರೆಗೆ ಅವನು ಹಿಂಸಿಸುವಲ್ಲಿ ದೇವಜನರಿಗೆ (ಪರಿಶುದ್ಧರಿಗೆ) ವಿರುದ್ಧ ವಾಗಿ ಜನಾಂಗಗಳನ್ನು ತರುವದಿಲ್ಲ ಎಂದರ್ಥವಾಗುತ್ತದೆ.

ಸಾವಿರ ವರ್ಷಗಳು ಸಮಯದ ದೀರ್ಘ ಅವಧಿಯ ಸಂಕೇತವಾಗಿರಬಹುದು. ದೇವರಿಗೆ "ಗುಡ್ಡಗಳಲ್ಲಿ ಸಾವಿರಾರು ಪಶುಗಳು" ಇರುತ್ತದೆ (ಕೀರ್ತನೆ 50:10), ಮತ್ತು ದೇವರ ಆಲಯದ ಅಂಗಳದಲ್ಲಿ ಕಳೆದ ಒಂದು ದಿನವು "ಬೇರೆ ಸಹಸ್ರ ದಿನಗಳಿಗಿಂತ ಉತ್ತಮವಾಗಿದೆ" (ಕೀರ್ತನೆ 84:10). ನಿಶ್ಚಯವಾಗಿಯೂ ಈ ವಾಕ್ಯಭಾಗದಲ್ಲಿಯ "ಒಂದು ಸಾವಿರವು" ಒಂದು ದೊಡ್ಡ ಸಂಖ್ಯೆಯ ಪ್ರತಿನಿಧಿ ಮಾತ್ರವೇ ಆಗಿರುತ್ತದೆ. "ಒಂದು ಸಾವಿರ" ಎಂಬುದು 20:2-7ರಲ್ಲಿ ಅಕ್ಷರಶಃವಾಗಿ ತೆಗೆದು ಕೊಳ್ಳುವಾಗ, ಒಂದು ಸಂಖ್ಯೆಯು ಸಂಕೇತಗಳಿಂದ ತುಂಬಿರುವ ಪುಸ್ತಕದಲ್ಲಿ ಕಾಣಿಸಿಕೊಳ್ಳುವಾಗ ಅದನ್ನು ಅಕ್ಷರಶಃವಾಗಿ ತೆಗೆದು ಕೊಳ್ಳುವದರಲ್ಲಿ ಯಾವ ಅರ್ಥವಿರುತ್ತದೆ?

ಹತಸಾಕ್ಷಿಗಳ ಪ್ರಾಣಗಳು "ಸಿಂಹಾಸನಗಳ" ಮೇಲೆ ಇರುವಂಥದ್ದು ಸಾವಿರ ವರ್ಷಗಳ ಅವಧಿಯಲ್ಲಿ ಅವರ ಕಾರಣವು ಜೀವಿಸುವುದು ಮತ್ತು ಜಯಹೊಂದುವುದು ಎಂಬುದನ್ನು ಸಾಂಕೇತಿಕವಾಗಿ ತೋರಿಸುತ್ತದೆ. ಅವರು "ಯಜ್ಞವೇದಿಯ ಕೆಳಗೆ" ಇರುವವರೆಗೆ, ಅದು "ಇನ್ನು ಸ್ವಲ್ಪ ಕಾಲ" ಇರುವುದು, ಅವರ ಜೊತೆ ಕ್ರೈಸ್ತರು ಕೊಲ್ಲಲ್ಪಡುವುದು ಮುಂದುವರಿಯುವುದು (6:11). ಅವರಿಗೆ "ಸಿಂಹಾಸನಗಳು" ಕೊಡಲ್ಪಡುವುದು (20:4) "ಇನ್ನು ಸ್ವಲ್ಪ ಕಾಲ"ವು ಅಂತ್ಯಗೊಂಡಿವೆ, ದೇವ ಜನರ (ಪರಿಶುದ್ಧರ) ಜನಾಂಗಿಕ ಕೊಲ್ಲುವಿಕೆಯು ನಿಂತಿದೆ, ಮತ್ತು ಹಿಂಸೆಯಿಂದ ತಡೆಯಲ್ಪಟ್ಟ ಸಾವಿರ ವರ್ಷಗಳು ಪ್ರಾರಂಭವಾಗಿವೆ ಎಂದು ಅರ್ಥಕೊಡುತ್ತದೆ.

ಈ ವಾಕ್ಯಭಾಗದಲ್ಲಿ, ಗ್ರೀಕ ಪದ *ezesan*[2] ಎಂಬುದು ಅಕ್ಷರಶಃವಾಗಿ "lived" ಎಂದರ್ಥಕೊಡುತ್ತದೆ. "ಜೀವಹೊಂದು" ಎಂಬುದು ಕ್ರಿಯಾಪದದ ಕಾಲಕ್ಕೆ ನ್ಯಾಯ ಮಾಡುವದಿಲ್ಲ ಇಲ್ಲವೇ ಸನ್ನಿವೇಶಕ್ಕೆ ಹೊಂದಿಕೊಳ್ಳುವದಿಲ್ಲ. ಆ ಕಾರಣದಿಂದ, ಈ ಪ್ರಾಣಗಳು ಅಕ್ಷರಶಃವಾಗಿ "ಜೀವಕ್ಕೆ ಬಂದವು" ಎಂದು ಹೇಳಲಿಕ್ಕಾಗದು. ಹಾಗಿದ್ದರೂ "ಜೀವಿಸಿದವು" ಎಂಬುದು ಸರಿಯಾಗಿದೆ, ಯಾಕಂದರೆ ಈ ಗುಂಪು "ಯಜ್ಞವೇದಿಯ ಕೆಳಗೆ ಇತ್ತು" ಎಂದು ಯೋಹಾನನು ಮೊದಲು ಸೂಚಿಸಿದ್ದಾನೆ (6:9, 10) ಮತ್ತು ಅರುಹು ಉಳ್ಳವರಾಗಿದ್ದರು.

ಪೌಲನು ತಾನು ಕ್ರೈಸ್ತನಾಗುವದಕ್ಕಿಂತ ಮೊದಲಿನ ತನ್ನ ಜೀವಿತಕ್ಕೆ ಸಂಬಂಧಿಸಿದ್ದರಲ್ಲಿ ಅದೇ ಪದವನ್ನು ಮತ್ತು ಕ್ರಿಯಾಪದದ ಕಾಲವನ್ನು ಉಪಯೋಗಿಸಿದ್ದಾನೆ. "ಫರಿಸಾಯನಾಗಿ ಜೀವಿಸಿದೆನು" ಎಂದು ಅವನು ಹೇಳಿದನು (ಅಪೊಸ್ತಲರ ಕೃತ್ಯಗಳು 26:5). ಅವನ ಹೇಳಿಕೆಯು ಅವನು ಫರಿಸಾಯನಂತೆ ಜೀವಕ್ಕೆ ಬಂದನು ಎಂದರ್ಥಕೊಡುವದಿಲ್ಲ; ಆದರೆ ಕ್ರೆಸ್ತನಾಗುವದಕ್ಕಿಂತ ಮೊದಲು ಅವನು ಹೇಗೆ "ಜೀವಿ

ಸಿದನು" ಎಂದರ್ಥವಾಗುತ್ತದೆ. ಹತಸಾಕ್ಷಿಯ ಕಾರಣದಿಂದ ಕ್ರೈಸ್ತತ್ವದ ಸತ್ತು ಹೋಗುವಿಕೆಯ ಬದಲು, ಕ್ರೈಸ್ತರ ರಕ್ತವು ಪ್ರತೀಕಾರ ತೆಗೆದು ಕೊಳ್ಳುವುದು, ಕ್ರೈಸ್ತ ಸಮಾಜವು ಸಮಾಧಾನದ ದೀರ್ಘ ಅವಧಿಯ ವರೆಗೆ ಕ್ರಿಸ್ತನೊಂದಿಗೆ "ಜೀವಿಸುವುದು ಮತ್ತು ಆಳ್ವಿಕೆ ಮಾಡುವುದು" ಎಂದು ಹೇಳಬಹುದು. "ಮೊದಲನೆಯ ಪುನರುತ್ಥಾನದವರು" (ಪ್ರಕಟನೆ 20:5) ಜಯಶಾಲಿಗಳಾಗಿ ಒಂದು ಸಾವಿರ ವರ್ಷಗಳ ವರೆಗೆ ಕ್ರಿಸ್ತನೊಂದಿಗೆ ಆಳ್ವಿಕೆ ಮಾಡುವರು. ಜನಾಂಗವು ಸತ್ತುಹೋದಂತೆ ಕಂಡರೂ (ಯೆಹೆಜ್ಕೇಲ 37:1-14) ದೇವರು ಇಸ್ರಾಯೇಲ ಜನಾಂಗವು ಜೀವಿಸುವಂತೆ ಮಾಡಿದಂತೆ, ಆತನು ಕ್ರೈಸ್ತತ್ವವು ಜೀವಿಸುವಂತೆ ಮಾಡುವನು. ಹಿಂಸೆಯನ್ನು ಎದುರಿಸಿದ ದೇವಜನರು ಅವರ ವಿಶ್ವಾಸವು ನಿರ್ಮೂಲವಾಗಿ ಹೋಗುವಂತೆ ಹಿಂಸಿಸಲ್ಪಡುವುದು ಎಂದು ಭಯಪಟ್ಟಿರಬಹುದು; ಆದರೆ ಅವರು, ಅವರನ್ನು ಹಿಂಸೆಯಲ್ಲಿ ನಡಿಸಿದ ರೋಮ್‌ದ ನಾಶನದ ನಂತರದ ದೀರ್ಘಸಮಯದ ಅವಧಿಯ ವರೆಗೆ ಕ್ರಿಸ್ತನೊಂದಿಗೆ ಸಮಾಧಾನದಲ್ಲಿ ಜೀವಿಸುವರು ಮತ್ತು ಆಳ್ವಿಕೆ ಮಾಡುವರು.

ಅವರ ಹಿಂಸೆಗೆ ಪ್ರಚೋದಕನಾದ ಸೈತಾನನು, ನಿರ್ಬಂಧಿಸಲ್ಪಡುವನು, ದೇವಜನರ ರಕ್ತವು ಮಹಾ ಪಟ್ಟಣದ ಪತನದೊಂದಿಗೆ ಪ್ರತೀಕಾರ ಹೊಂದುವುದು ಮತ್ತು ಕ್ರೈಸ್ತತ್ವವು ದೀರ್ಘಕಾಲದವರೆಗೆ ಜಾನಾಂಗಿಕ ಹಿಂಸೆಯ ಗಾಳಿಯಿಲ್ಲದೆ ಜೀವಿಸುವುದು, ಅದರ ನಂತರ, ಸೈತಾನನು, ಸ್ವಲ್ಪ ಸಮಯಕ್ಕೆ ಬಿಡುಗಡೆ ಹೊಂದಿದಾಗ, ಹಿಂಸೆಯ ಇನ್ನೊಂದು ಅಲೆಯಲ್ಲಿ ಜನಾಂಗಳನ್ನು ನಡಿಸಲು ಪ್ರಯತ್ನಿಸುವನು; ಆದರೆ ದೇವರು ಅವನ ಪ್ರಯತ್ನವನ್ನು ತಡೆಯುವನು ಹಾಗೂ ಅವನನ್ನು ಬೆಂಕಿಯ ಕೆರೆಯಲ್ಲಿ ಎಸೆಯುವನು (20:3, 7-10).

"ಎರಡನೆಯ ಮರಣವು" (20:6) ಇನ್ನೊಂದು ಮರಣದಿಂದ ಹಿಂಬಾಲಿಸುವ ಎರಡನೆಯ ಒಂದು ಪುನರುತ್ಥಾನವನ್ನು ಅನ್ವಯಿಸುವದಿಲ್ಲ. "ಎರಡನೆಯ ಮರಣವು" "ಬೆಂಕಿಕೊಳ್ಳದಲ್ಲಿ"ಯ ಶಿಕ್ಷೆಗೆ ಸಂಕೇತವಾಗಿರುವುದು (20:14). ಮೊದಲನೆಯ ಮರಣವು ದೈಹಿಕ ಮರಣವಾಗಿರುವುದು ಮತ್ತು ಎರಡನೆಯ ಮರಣವು ಬೆಂಕಿಯ ಕೊಳ್ಳವಾಗಿರುವುದು.

## ಮುಕ್ತಾಯ

ಭೂಮಿಯ ಮೇಲೆ ಯೇಸುವಿನ ಭವಿಷ್ಯದ ಸಾವಿರ ವರ್ಷದ ಆಳ್ವಿಕೆಯ ಬದಲು, ಬೈಬಲು ಆತನು ಈಗ ತನ್ನ ರಾಜ್ಯದ ಮೇಲೆ ಪರಲೋಕದಿಂದ ಆಳ್ವಿಕೆ ಮಾಡುತ್ತಿರುವನು, ಅದು ಪರಲೋಕ ಭೂಲೋಕದಲ್ಲೆಲ್ಲಾ ವಿಸ್ತರಿಸಿರುವುದು ಎಂದು ಬೋಧಿಸುತ್ತದೆ. ಅರಸ ಯೇಸುವು ಈಗ ತನ್ನ ಪರಲೋಕದ ಸಿಂಹಾಸನದ ಮೇಲೆ ಕುಳಿತುಕೊಂಡಿರುವನು, ಅಲ್ಲಿ ಆತನು ತಂದೆಯ ಬಳಿಗೆ ಏರಿ ಹೋದಂದಿನಿಂದ ಆಳ್ವಿಕೆ ಮಾಡುತ್ತಿರುವನು. ಆತನು ಪುನಃ ಬರುವಾಗ, ಭೂಲೋಕದ ಮೇಲೆ ಒಂದು ಸಾವಿರ ವರ್ಷದ ಆಳ್ವಿಕೆಯನ್ನು ಪ್ರಾರಂಭಿಸಲು ಬರುವದಿಲ್ಲ; ಆದರೆ ತನ್ನ ಇಂದಿನ ಆಳ್ವಿಕೆಯನ್ನು ಅಂತ್ಯಗೊಳಿಸಲು ಬರುವನು. ಈ ದುಷ್ಟಿಕೋನಕ್ಕೆ ವಿರುದ್ಧವಾಗಿರುವ ಯಾವುದೇ ವ್ಯಾಖ್ಯಾನವು ಸಾಂಕೇತಿಕ ಭಾಷೆಯ ತಪ್ಪಾದ ವ್ಯಾಖ್ಯಾನದ ಮೇಲೆ ಕಟ್ಟಲ್ಪಟ್ಟಿರುವುದು ಮತ್ತು ಅಕ್ಷರಶಃವಾಗಿ ವಾಕ್ಯಭಾಗಗಳಿಗೆ ವ್ಯತಿರಿಕ್ತವಾದದ್ದಾಗಿರುತ್ತದೆ.

ಟಿಪ್ಪಣಿಗಳು

[1]ನೋಡಿರಿ ಮತ್ತಾಯ 28:18; ಅಪೊಸ್ತಲರ ಕೃತ್ಯಗಳು 2:33, 34; 5:31; ರೋಮಾಪುರ 8:34; ಎಫೆಸ 1:20-23; ಇಬ್ರಿಯ 1:3; 1 ಪೇತ್ರ 3:22. [2]*Ezesan* is an indicative, aorist, active verb from the root *zao*. It is translated "lived" KJV, RSV) and "came to life" (NIV, NASB).

© 2009 Truth for Today